# 78

# “ಆ ಗಳಿಗೆಯು ಬಂದಾಗ”

## ಯೋಹಾನ 12:20-36, 46-48, ಒಂದು ನಿಕಟ ನೋಟ

ಅನೇಕ ಸಂದರ್ಭಗಳಲ್ಲಿ, ನನಗೆ “ನನಗೆ ಬೋಧಿಸಲು ಸಿಕ್ಕ ಇನ್ನೊಂದು ಅವಕಾಶ” ಎಂಬ ವಿಷಯದ ಮೇಲೆ ಬೋಧಿಸಲು ಹೇಳಲ್ಪಡುತ್ತಿತ್ತು.[1] ಒಂದಕ್ಕಿಂತ ಹೆಚ್ಚು ಬಾರಿ, “ನಾನು ಬೋಧಿಸುವ ಪ್ರಸಂಗವ ಕೊನೆಯ ಪ್ರಸಂಗವಾಗಿದ್ದರೆ ನಾನು ಏನನ್ನು *ಬೋಧಿಸುತ್ತಿದ್ದೆ?*” ಎಂದು ನಾನು ನನ್ನನ್ನು ಕೇಳಿಕೊಂಡಿದ್ದೇನು. ಪ್ರತಿಬಾರಿಯೂ ನಾನು ಈ ಪ್ರಶ್ನೆಯನ್ನು ಕೇಳಿಕೊಂಡಾಗ ನಾನು ವಿಭಿನ್ನವಾದ ಸಮಾರೋಪಗಳನ್ನು ಕೊಡುತ್ತಾ ಬಂದಿದ್ದೇನೆ. ಯಾಕೆಂದರೆ ನನ್ನ ಆಯ್ಕೆಯು ನಿರೀಕ್ಷಿಸುತ್ತಿರುವ ಕೇಳುಗರ ಅವಶ್ಯ ಕರೆಯ ಮೇಲೆ ಮತ್ತು ಆ ಸಮಯದಲ್ಲಿನ ನನಗೆ ಇದ್ದ ಮಾನಸಿಕ ಸ್ಥಿತಿಯ ಮೇಲೆ ಇರುತ್ತಿತ್ತು.

ಯೋಹಾನ 12ರಲ್ಲಿ, ಯೇಸು ಮಾಡಿದ ಅಂದರೆ ಕೊನೆಯ ಸಾರ್ವತ್ರಿಕ ಉಪದೇಶ[2] ಯೇಸು ಕ್ರಿಸ್ತನು ಕ್ರೂಜೆಯ ಮೇಲೆ ಏಳು ಹೇಳಿಕೆಗಳ ಮುಂಚೆ ಮಾಡಿದ ಪ್ರಸಂಗವು ಇದಾಗಿತ್ತು. ಒಂದು ವೇಳೆ ಯೇಸು “ನನಗೆ ಒಂದು ವೇಳೆ ಇನ್ನೊಂದು ಬೋಧನೆ ಮಾಡುವ ಅವಕಾಶ ಇದ್ದರೆ” ಎಂಬ ಶಿರ್ಷಿಕೆಯನ್ನು ಕೊಟ್ಟಿದ್ದಾದರೆ ಆತನು ಇದಕ್ಕೆ ಏನು ಹೇಳುತ್ತಿದ್ದನು? ಬಹುಶಃ ಯೋಹಾನ 12:20-36 ಈ ಪ್ರಶ್ನೆಗೆ ಉತ್ತರಿಸುವುದಾಗಿದೆ.

ಆ ದಿನ ಮಂಗಳವಾರವಾಗಿದ್ದು ಯೇಸುವಿನ ಸೇವೆಯ ಕೊನೆಯ ವಾರವಾಗಿತ್ತು. ಯೇಸು ದೇವಾಲಯದಲ್ಲಿ ಬೋಧಿಸುತ್ತಿರುವಾಗ,[3] ಕೆಲ ಅನ್ಯಜನರು ಯೇಸುವನ್ನು ನೋಡ ಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. “ಇದಲ್ಲದೆ ದೇವಾರಾಧನೆ ಮಾಡಬೇಕೆಂದು ಜಾತ್ರೆಗೆ ಬಂದವರಲ್ಲಿ ಕೆಲವು ಮಂದಿ ಗ್ರೀಕರಿದ್ದರು” (ಯೋಹಾನ 12:20) ಎಂದು ಕಥೆಯು ಪ್ರಾರಂಭವಾಗುತ್ತದೆ. ಇವರು ಯೆಹೂದಿ ಮತಾಂತರಿಗಳಾಗಿರಬಹುದು ಆದರೆ ಅವರು ಬಹುಶಃ ಕೊರ್ನೆಲಸ್‌ನಂತೆ “ದೇವಭಕ್ತಿಯುಳ್ಳವರು”[4] ಆಗಿರಬಹುದು (ಅಪೊಸ್ತಲರ ಕೃತ್ಯಗಳು 10:1, 2): ಈ ಅನ್ಯ ಜನರು ನಿಜವಾದ ದೇವರನ್ನು ನಂಬಿದವರಾಗಿದ್ದರು ಆದರೆ ಯೆಹೂದಿಗಳಾಗುವುದಕ್ಕೆ ಪ್ರಕ್ರಿಯೆಯಲ್ಲಿ ತಮ್ಮ ಮತಾಂತರ ಹೊಂದುವುದನ್ನು ಇನ್ನೂ ತೊಡಗಿಸಿಕೊಂಡಿರಲಿಲ್ಲ.[5]

“ಇವರು ಗಲಿಲಾಯದಲ್ಲಿರುವ ಬೆತ್ಸಾಯಿದ ಊರಿನ ಫಿಲಿಪ್ಪಿನ ಬಳಿಗೆ ಬಂದರು …” (ಯೋಹಾನ 12:21). ಆ ಗ್ರೀಕರು ಫಿಲಿಪ್ಪನ ಬಳಿಗೆ ಏಕೆ ಬಂದರು ಎಂಬುದರ ಬಗೆಗೆ ನಮಗೆ ಖಚಿತವಿಲ್ಲ. ಬಹುಶಃ ಫಿಲಿಪ್ಪನು ಗ್ರೀಕ್ ಹೆಸರನ್ನು ಹೊಂದಿದ್ದರಿಂದ ಇರಬಹುದು.[6] ಅವರೂ ಕೂಡಾ ಬೆತ್ಸಾಯಿದದವೇ ಆಗಿದ್ದರಿಂದಲೂ ಇರಬಹುದು.[7] ಬಹುಶಃ ಫಿಲಿಪ್ಪನು ಅವರು ಸಂಧಿಸಿದ ಮೊದಲ ಯೇಸುವಿನ ಶಿಷ್ಯನು ಆಗಿರಬಹುದು.

“ಅಯ್ಯಾ, ಯೇಸುವನ್ನು ನೋಡಬೇಕೆಂದು ಬಂದಿದ್ದೇವೆಂದು ಬಹುವಾಗಿ ಬೇಡಿ ಕೊಂಡರು” (ಯೋಹಾನ 12:21). ಅವರು ಯೇಸುವಿನ ಬಗ್ಗೆ ಹೇಗೆ ತಿಳಿದಿದ್ದರು? ಕೆಲ ದಿನಗಳ ಹಿಂದೆ ಆತನು ದೇವಾಲಯನ್ನು ಶುದ್ಧೀಕರಿಸಿದ ಸಮಯದಲ್ಲಿ ಅವರು ಉಪಸ್ಥಿತವಿದ್ದಿರಬಹುದು. ಅನ್ಯಜನರ ಆವರಣದಲ್ಲಿ ಆತನು ಬೋಧಿಸಿದ್ದನ್ನು ಅವರು ಕೇಳಿರಲೂ ಬಹುದು, ಅವರು ಹೇಗೆ ಕೇಳಿರಲಿ ಅವರು ಆತನನ್ನು ಇನ್ನೂ ಚೆನಾಗಿ ನೋಡಲು ಬಯಸಿದರು.[8] ಅವರು “… *ಬಹುವಾಗಿ* ಬೇಡಿಕೊಂಡರು, …” ಎಂದು ವೇದಭಾಗವು ಹೇಳುತ್ತದೆ. ಮೂಲ ವೇದಭಾಗವು ಅವರು ತಮ್ಮ ವಿನಂತಿಯನ್ನು ಒತ್ತಾಯಿಸಿದರು ಎಂದು ಸೂಚಿಸುವುದಾಗಿದೆ.

ಏನು ಮಾಡಬೇಕೆಂಬುದರ ಬಗ್ಗೆ ಫಿಲಿಪ್ಪನಿಗೆ ಖಚಿತವಾಗಿರಲಿಲ್ಲ. ಕ್ರಿಸ್ತನು ತನ್ನ ಹನ್ನೆರಡು ಮಂದಿಗೆ ಅನ್ಯಜನಾಂಗದ ಹತ್ತಿರ ಹೋಗಬೇಡಿರಿ, ಆದರೆ "ಕಳೆದು ಹೋದ ಕುರಿಯಂತಿರುವ ಇಸ್ರಾಯೇಲ್ಯನ ಮನೆತನದವರ ಬಳಿಗೆ ಹೋಗಿರಿ" ಎಂದು ಹೇಳಿದ್ದು (ಮತ್ತಾಯ 10:5, 6). ಫಿಲಿಪ್ಪನು ಅದನ್ನು ಮಿತ್ರನ ಸಹಾಯಕ್ಕಾಗಿ ಹುಡುಕಿದನು:[9] "ಫಿಲಿಪ್ಪನು ಆಂದ್ರೇಯನಿಗೆ ಹೇಳಿದನು" (ಯೋಹಾನ 12:22). ನಂತರ ಇಬ್ಬರೂ "ಆಂದ್ರೇಯ ಫಿಲಿಪ್ಪ ಯೇಸುವಿಗೆ ಹೇಳಿದರು" (ವಚನ 22).

ಗ್ರೀಕರ ವಿನಂತಿಯನ್ನು ಯೇಸು ಸಮ್ಮತಿಸದನೋ ಇಲ್ಲವೋ ಎಂಬುದು ನಮಗೆ ಹೇಳಲ್ಪಟ್ಟಿಲ್ಲ. ಯೋಹಾನ 12ರ ಕೊನೆಯ ಭಾಗದಲ್ಲಿ ಯೇಸುವಿನ ಮಾತುಗಳಿಗೋಸ್ಕರದ ಹಿನ್ನಲೆಯನ್ನು ಕೊಡುವುದಕ್ಕಾಗಿ ಯೋಹಾನನು ಕಥೆಯನ್ನು ದಾಖಲಿಸಿದ್ದಾನೆ ಹೊರತು ನಮಗೆ ವಿವರಣೆ ಕೊಡುವುದಕ್ಕಲ್ಲ. ಏನೇ ಆದರೂ, ಆತನು ತನ್ನ ಪ್ರತಿಕ್ರಿಯೆಯನ್ನು ಮಾಡಿದಾಗ ಆ ಗ್ರೀಕರು ಮತ್ತು ಎಲ್ಲಾ ಇತರ ಅನ್ಯ ಜನರು ನಮ್ಮನ್ನು ಹಿಡಿದುಕೊಂಡು ಪ್ರತ್ಯಕ್ಷವಾಗಿ ಎಲ್ಲರೂ ಕರ್ತನ ಮನದಲ್ಲಿ ಇದ್ದೇವೆ (ನೋಡಿರಿ ವಚನ 32).

ಆಂದ್ರೆಯ ಮತ್ತು ಪಿಲಿಪ್ಪರು ಯೇಸುವಿಗೆ ಗ್ರೀಕರು ಬಯಸುವುದನ್ನು ತಿಳಿಸಿದಾಗ, ಆತನು ಅವರಿಗೆ "ಸಮಯವು ಬಂದದ್ದು" ಎಂದು ಉತ್ತರಿಸಿದನು (ವಚನ 23). ಈ ಪದದೊಡನೆ, ಕರ್ತನು ತನ್ನ ಅಂತಿಮ ಸಾರ್ವಜನಿಕ ಮಂಡನೆಯ ವಿಷಯವನ್ನು ಪರಿಚಯಿಸಿದನು. ಈ ಸಮಯದ ತನಕ, ಆತನು "ಕಾಲವು ಇನ್ನೂ *ಬಂದಿಲ್ಲ*" ಎಂದು ಹೇಳುತ್ತಿದ್ದನು (ಯೋಹಾನ 7:30; ಒತ್ತಿ ಹೇಳಿದ್ದು ನನ್ನದು; ನೋಡಿರಿ ಯೋಹಾನ 2:4; 7:6; 8:20); ಈಗ *ಅದು* ಬಂದಿದೆ (ನೋಡಿರಿ ಯೋಹಾನ 13:1).

ಯೇಸು ಅವರಿಗೆ, "ಸಮಯವು ಬಂದದೆ" ಎಂದು ಉತ್ತರಿಸುವಲ್ಲಿ, ಮೂಲತವಾಗಿ ಆತನ ಮನದಲ್ಲಿ ಮರಣವು ಇತ್ತು (ಯೋಹಾನ 12:24); ಆದರೆ ಅದಕ್ಕೆ ಸಂಬಂಧಿಸಿದ ಅನೇಕ ವಿಚಾರಗಳನ್ನು ವೇದಭಾಗವು ಮುಟ್ಟುವುದಾಗಿದೆ. ಈ ಕಾರಣಕ್ಕಾಗಿ "ಸಮಯವು ಬಂದದೆ" ಎಂಬ ನಮ್ಮ ಅಧ್ಯಯನವು ವಿಭಿನ್ನ ವಿಷಯಗಳನ್ನು ಹೊಂದಿಕೊಂಡಿದೆ. ಯಾವಾಗಲೂ, ಹೇಗೋ, ಕೇಂದ್ರಿಯ ಅಂಶವು ಕ್ರೂಜೆಯೇ ಆಗಿದೆ.

## ಶಿಲುಬೆಗಾಗಿನ ಸಮಯ ಮತ್ತು ಸಮರ್ಪಣೆಗಳು (ವಚನಗಳು 23-26)

### ಶಿಲುಬೆ (ವಚನಗಳು 23, 24)

ಕ್ರಿಸ್ತನು, "ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಕಾಲವು ಬಂದದೆ" ಎಂದು ತನ್ನ ಪ್ರಸಂಗವನ್ನು ಪ್ರಾರಂಭಿಸಿದನು[10] (ವಚನ 23). "ಮನುಷ್ಯಕುಮಾರನು" ಎಂಬ ಪದವು ಮೆಸ್ಸೀಯನನ್ನು ಸೂಚಿಸುವುದಾಗಿದೆ (ದಾನಿಯೇಲ 7:13). "ಸಮಯವು ಬಂದದೆ" ಎಂಬ ಯೇಸುವಿನ ಹೇಳಿಕೆಯು ಕ್ರಿಸ್ತನನ್ನು ಮಹಿಮೆ ಪಡಿಸುವುದಕ್ಕಾಗಿಯೇ. ಆತನು ತನ್ನ ಮರಣದ ಬಗೆಗೆ ಯೋಚಿಸುತ್ತಿದ್ದಾನೆ (ಯೋಹಾನ 12:24), ಆದರೆ ಆತನು ಸಮಾಧಿಯಾಚೆಯ ಪುನರುತ್ಥಾನ ಮತ್ತು ದಿವಾರೋಹಣಗಳನ್ನು ನೋಡುವಷ್ಟು ಸಮರ್ಥನಾಗಿದ್ದಾನೆ.

ಯೇಸುವಿನ ಮಾತುಗಳು ಗುಂಪಿಗೆ ಕುತೂಹಲವನ್ನು ಉಂಟುಮಾಡಿರಬಹುದು. "ಮಹಿಮೆಪಡಿಸುವದು" ಎಂಬ ಪದವು ಮೆಸ್ಸೀಯನು ರಾಜಕೀಯ ರಾಜ್ಯವನ್ನು ಕಟ್ಟುವದನ್ನು ಸೂಚಿಸುತ್ತಿದ್ದಾನೆ ಎಂದು ಅವರು ತಮ್ಮ ಮನದಲ್ಲಿ ಅಂದುಕೊಂಡಿರಬಹುದು. ಕೆಲ ದಿನಗಳ ಹಿಂದೆ ಕ್ರಿಸ್ತನು ತುತ್ತೂರಿಯೊಡನೆ ಪಟ್ಟಣದಲ್ಲಿ ಪ್ರವೇಶಿಸಿದಾಗ ಕ್ರಿಸ್ತನು ಮಹಿಮೆಗೊಳಗಾಗುವನು ಎಂದು ಅವರು ಅಪೇಕ್ಷಿಸಿದ್ದರು; ಆದರೆ ಕೆಲಕಾಲಗಳಿಂದ, ಆತನು ಅವರ ಅಪೇಕ್ಷೆಯನ್ನು ಈಡೇರಿಸಲಿಲ್ಲ. ಈಗ ಅಂತಿಮವಾಗಿ ಈ ಮಹಿಮೆಪಡಿಸುವುದರ ಬಗೆಗೆ

ಮಾತನಾಡುತ್ತಿದ್ದಾನೆ. ರೋಮನ್ನರ ವಿರುದ್ಧ ಪ್ರಹಾರಮಾಡಿ ತನ್ನ ರಾಜ್ಯವನ್ನು ಸ್ಥಾಪಿಸುವ ಪ್ರಚಾರವನ್ನು ಆರಂಭಿಸುವ ವೇಳಾಪಟ್ಟಿಯ ಪ್ರಕಟಣೆಗಾಗಿ ಅವರು ಬಹುಶಃ ಉಸಿರುಬಿಗಿಹಿಡಿದು ಕಾಯುತ್ತಿರಬಹುದು. ಅವರ ಅವಲೋಕನವು ಅದಾಗಿತ್ತು, ಕಟ್ಟಕಡೆಯಲ್ಲಿ ನಿತ್ಯತ್ವದ ತುತ್ತೂರಿಯ ಕರೆಯು ಧ್ವನಿಸಿತು, ಪರಲೋಕದ ಸೈನಿಕರು ಸನ್ನದ್ಧರಾರು ಮತ್ತು ವಿಜಯವು ಎದುರಲ್ಲಿಯೇ ಇತ್ತು! ಸೈನ್ಯದ ಕೌಶಲ್ಯತೆಯ ಬಗೆಗೆ ಚರ್ಚಿಸದೆ, ಕ್ರಿಸ್ತನು ಮರಣದ ಬಗೆಗೆ ಮಾತನಾಡಲು ಪ್ರಾರಂಭಿಸಿದನು ಇದರಿಂದ ಅವರು ಎಷ್ಟು ನಿರಾಶರಾಗಿರಬಹುದು!

ಕರ್ತನು ಸರಳವಾದ ಆದರೆ ಬಲಯುತವಾದ ದೃಷ್ಟಾಂತವನ್ನು ಬಳಸಿದನು: "ನಿಮಗೆ ನಿಜನಿಜವಾಗಿ ಹೇಳುತ್ತೇನೆ ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೆಯಾಗಿ ಉಳಿಯುವದು; ಸತ್ತರೆ ಬಹಳ ಫಲಕೊಡುವದು" (ವಚನ 24). ಬೀಜವನ್ನು ಅಟ್ಟಣಿಗೆಯ ಮೇಲೆ ಇಡಿರಿ ಅದು ಎಂದು ಬಹಳವಾಗಿ ಮಾರ್ಪಡದು; ಅದು ತಿರುಗಿ "ಒಂದೆಯಾಗಿ ಉಳಿಯುದು." ಆ ಬೀಜವನ್ನು ಭೂಮಿಯಲ್ಲಿ ಹಾಕಿರಿ ಮತ್ತು ಪಾಲಿಸಿರಿ. ಮತ್ತು ಅದು "ಸಾಯಬೇಕು" (ಅಂದರೆ ಅದು ನಾಶವಾಗಬೇಕು ಮತ್ತು ತನ್ನತನವನ್ನು ಕಳಕೊಳ್ಳಬೇಕು) - ಆದರೆ ಈ "ಮರಣವು" ಅನೇಕ "ಫಲವನ್ನು ಕೊಡಲು" ಸಮರ್ಥವಾಗಿಸುವದು. ಇದು ನೂರರಷ್ಟು ಅಥವಾ ಅರವತ್ತರಷ್ಟು ದ್ವಿಗುಣಗೊಳ್ಳುವದು (ಮತ್ತಾಯ 13:8), ಈ ಉದಾಹರಣೆಯಲ್ಲಿ, ಯೇಸುವು ತಾನೇ ಬೀಜವಾಗಿದ್ದಾನೆ, ಆತನು ಮರಣಿಸದಿದ್ದರೆ, ಆತನು ತನ್ನ ಜೀವವನ್ನು ಸಂರಕ್ಷಿಸಿಕೊಂಡಿದ್ದಾದರೆ ಆತನೆಂದಿಗೂ ಇತರರನ್ನು ಆಶೀರ್ವದಿಸು. ತನ್ನ ಮರಣದ ಮೂಲಕವೇ ಮಾತ್ರ ಆತನು ಹೊಸ ಜೀವಿತವನ್ನು ಅಸ್ತಿತ್ವಕ್ಕೆ ತರಲು ಸಾಧ್ಯ.

**ಹೊಣೆಗಾರಿಕೆ (ವಚನಗಳು 25, 26)**

ಕ್ರಿಸ್ತನು ಮುಂದುವರೆಸುತ್ತಾ "ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು, ಇಹಲೋಕದಲ್ಲಿ ತನ್ನ ಪ್ರಾಣವನ್ನು ಹಗೆ ಮಾಡುವವನು ನಿತ್ಯಜೀವಕ್ಕಾಗಿ ಅದನ್ನು ಕಾಪಾಡಿಕೊಳ್ಳುವನು" (ವಚನ 25) ಎಂದು ಹೇಳಿದನು. ಇಲ್ಲಿ ಬಳಸಲ್ಪಟ್ಟಂತ "ಹಗೆ ಮಾಡುವವನು" ಎಂಬ ಪದದ ಅರ್ಥವು "ಪ್ರೀತಿಸದೆ ಇರುವವು" ಎಂದಾಗಿದೆ,[11] ನಾವು ನಮ್ಮ ಜೀವಿತವನ್ನು ಕರ್ತನ ಚಿತ್ತವನ್ನು ಮಾಡುವುದಕ್ಕಿಂತ ಕಡಿಮೆಯಾಗಿ ಪ್ರೀತಿಸಬೇಕು. ಈ ಪ್ರಸಂಗವು "ತನ್ನ ಪ್ರಾಣದ ಮೇಲೆ ಮಮತೆಯಿಡುವವನು ಅದನ್ನು ಕಳಕೊಳ್ಳುವನು"; "ಇಹಲೋಕದಲ್ಲಿ ನಿಮ್ಮ ಪ್ರಾಣವನ್ನು ಹಗೆ ಮಾಡಿದ್ದಾದರೆ ಅದನ್ನು ಕಾಪಾಡಿಕೊಳ್ಳುವಿರಿ"; "ಜೀವಿಸಬೇಕಾದರೆ ಇರುವ ಒಂದೇ ಮಾರ್ಗವು ಸಾಯುವುದೇ ಆಗಿದೆ" ಎಂಬ ವಿರೋಧಾ ಭಾಸದ ಹೇಳಿಕೆಗಳೊಂದಿಗೆ ಕೂಡಿದೆ.

ಯೇಸು ಈ ಮಾತುಗಳನ್ನು ತನಗೆ ಅನ್ವಯಿಸಿಕೊಂಡನು: ಆತನು ಉದ್ದೇಶವನ್ನು ಪರಿಪೂರ್ಣಗೊಳಿಸಬೇಕಾದರೆ, ದೇವರ ಯೋಜನೆಗಳಲ್ಲಿ ಮಹತ್ವವನ್ನು ಹೊಂದಿದ್ದಾದರೆ ಆತನು ಮರಣಿಸಲೇಬೇಕು. ಆತನ ಮಾತುಗಳು ನಮಗೂ ಕೂಡಾ ಅನ್ವಯವಾಗಿವೆ. ನಾವೂ ಸಹ ದೇವರಿಗೆ ಮಹತ್ವದ್ದವರಾಗಿರಬೇಕಾದರೆ "ಮರಣಿಸಲೇಬೇಕು." ಅನೇಕ ಆದಿ ಕ್ರೈಸ್ತರು ದೇವರಿಗೋಸ್ಕರ ನಂಬಿಗಸ್ತರಾಗಿ ಉಳಿದುಕೊಳ್ಳಲು ದೈಹಿಕವಾದ ಮರಣವನ್ನು ಹೊಂದಿದರು (ಪ್ರಕಟಣೆ 2:10). ಆತರದ ತ್ಯಾಗವನ್ನು ಮಾಡಲು ನಮಗೆ ಕರೆಕೊಡದಿದ್ದಾಗ್ಯೂ, ನಾವು ಇನ್ನೂ "ಸ್ವಾರ್ಥಕ್ಕಾಗಿ ಮರಣಿಸಬೇಕು." ಪೌಲನು ಹೀಗೆ ಬರೆಯುತ್ತಾನೆ. "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ" (ಗಲಾತ್ಯ 2:20).

ಯೇಸು ಮುಂದುವರೆಸುತ್ತಿದ್ದರಂತೆಯೇ, ಆತನು ತನ್ನ ವಿಚಾರವನ್ನು ವಿಷಾದವಾಗಿ ವಿವರಿಸಿದನು ಮತ್ತು ಆತನಿಗಾಗಿ "ಮರಣಿಸುವ" ಸೇವೆಯಲ್ಲಿ ಇರುವುದಕ್ಕೆ ಬಯಸುವುದಕ್ಕೆ

ಒಂದು ಬಲಯುತವಾದ ಪ್ರೇರಣೆಯನ್ನು ಕೊಟ್ಟನು. ಆತನು "ಯಾವನಾದರೂ ನನ್ನ ಸೇವೆಯನ್ನು ಮಾಡುವವನಾದರೆ ..." (ಯೋಹಾನ 12:26) ಎಂದು ಪ್ರಾರಂಭಿಸಿದನು. ಕರ್ತನಿಗೋಸ್ಕರ ಸ್ವಾರ್ಥರಹಿತ ಜೀವಿತವನ್ನು ನಡೆಸುವ ಮೂಲಕ ನಾವು ನಮ್ಮ ಪ್ರಾಣವನ್ನು "ಹಗೆ" ಮಾಡುವುದನ್ನು ನಾವು ತೋರಿಸಬೇಕು. ಒಬ್ಬನು ಆ ಒಪ್ಪಿಸಿಕೊಳ್ಳುವಿಕೆಯನ್ನು ಮಾಡಲು ಇಚ್ಛಿಸುವನಾದರೆ "ಆತನು ನನ್ನ ಹಿಂದೆ ಬರಲಿ" ಎಂದು ಹೇಳಿದನು (ಯೋಹಾನ 12:26). ಈ ರೀತಿಯ ಯೋಗ್ಯವಾದ ಒಪ್ಪಿಸಿಕೊಳ್ಳುವಿಕೆಯನ್ನು ಮಾಡುವಿಕೆಗೆ ಸಿಕ್ಕುವ ಬಹುಮಾನಗಳು ಆತನ ಮುಂದಿನ ಹೇಳುಕೆಯಲ್ಲಿ ಪ್ರತಿಫಲಿತವಾಗಿವೆ: "ಎಲ್ಲಿ ನಾನಿರುತ್ತೇನೋ[12] ಅಲ್ಲಿ ನನ್ನ ಸೇವಕನೂ ಸಹ ಇರುವನು" (ವಚನ 26). (ನಂತರ ಯೇಸು ಈ ವಿಚಾರವನ್ನು ಯೋಹಾನ 14:1-3ರಲ್ಲಿ ವಿಸ್ತರಿಸಿದ್ದಾನೆ.) ನಂತರ ಆತನು "ಯಾವನಾದರೂ ನನ್ನ ಸೇವೆಯನ್ನು ಮಾಡುವವನಾರೆ ತಂದೆಯು ಅವನಿಗೆ ಬಹುಮಾನಿಸುವನು" (ಯೋಹಾನ 12:26). ದೇವರಿಂದ ಬಹುಮಾನಿಸಿಕೊಳ್ಳುವುದನ್ನು ಊಹಿಸಿಕೊಳ್ಳಿರಿ! ಪೌಲನು "ಕ್ಷಣ ಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯತಧಿಕವಾದ ಪ್ರತಿಫಲವನ್ನು ಉಂಟುಮಾಡಿ ನನಗೆ ನಿರಂತರವಾಗಿರು ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ" (2 ಕೊರಿಂಥ 4:17)!

## ತೊಳಲಾಟ ಮತ್ತು ಸಮರ್ಥನೆಗೋಸ್ಕರದ ಸಮಯ (ವಚನಗಳು 27-30)

### ತೊಳಲಾಟ (ವಚನ 27)

ಯೇಸು ಮರಣಿಸುವುದರ ವಿಷಯದ ಬಗೆಗೆ ಮಾತನಾಡುವುದರಲ್ಲಿ ಹಿಜರಿಯುತ್ತಿದ್ದಿಲ್ಲ, ಆದರೆ ಆ ವಿಷಯವು ಆತನಿಗೆ ಅಲ್ಹಾದಕರವಾಗಿತ್ತೂ ಎಂದೂ ಅಲ್ಲ. ಮರಣವನ್ನು ಎದುರಿಸಿವದು ನಮಗೆ ಸುಲಭವಾದದ್ದು ಅಲ್ಲ, ಮತ್ತು ಕರ್ತನಿಗೂ ಸಹ ಅದು ಸರಳವಾದದ್ದು ಆಗಿರಲಿಲ್ಲ. ಅತನು ರೋಬೋಟ್‌ನಿಂದ ಪ್ರಯೋಜಿಸಲ್ಪಟ್ಟನೂ ಅಲ್ಲ. ಆತನು ಮಾಂಸ ಮತ್ತು ರಕ್ತದಿಂದ ಕೂಡಿದವನು ಆಗಿದ್ದನು; ನಾವು ನೊಂದುಕೊಳ್ಳುವ ಹಾಗೆ ಆತನು ನೊಂದನು.

"... ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ" ಎಂದು ಕ್ರಿಸ್ತನು ಪ್ರಾರ್ಥಿಸಿದ ಗೆತ್ಸೆಮನೆಯಲ್ಲಿನ ದೃಷ್ಯವನ್ನು ಯೋಹಾನನು ದಾಖಲಿಸುತ್ತಿಲ್ಲ (ಮತ್ತಾಯ 26:39).[13] ಹೇಗೋ, ಗೆತ್ಸಮನೆ ತೋಟಕ್ಕೆ ಹೋಗುವುದಕ್ಕೆ ಮುಂಚಿಯೇ ಆತನಲ್ಲಿ ಇದ್ದ ಆತ್ಮನ ದೃಷ್ಯವನ್ನು ನಮಗೆ ಕೂಟ್ಟಿದ್ದಾನೆ. "ಈಗ ನನ್ನ ಪ್ರಾಣವು ತತ್ತರಿಸುತ್ತದೆ" ಎಂದು ಕರ್ತನು ಹೇಳಿದನು (ಯೋಹಾನ 12:27). ದಿ ನ್ಯೂ ಇಂಗ್ಲೀಷ್ ಬೈಬಲ್‌ನಲ್ಲಿ "ನನ್ನ ಆತ್ಮವು ಕಳವಳದಲ್ಲಿ ಇದೆ" ಎಂದಿದೆ. ಸಂಕಟಕರವಾದ ಸಂಗತಿಗಳು ಮುಂದಿದ್ದವು: ದೈಹಿಕಮರಣದ ತಲ್ಲಣದ ಜೊತೆ ಆತ್ಮೀಕ ಮರಣದ ದೊಡ್ಡ ತಲ್ಲಣವೂ (ದೇವರಿಂದ ಬೇರೆ ಯಾಗುವಿಕೆ) ಕ್ರೂಜೆಯ ಬಗೆಗೆ ನಾಚಿಕೆ, ಸೈತಾನನೊಡನೆ ಆತ್ಮೀಕ ಯುದ್ಧ (12:31), ಮತ್ತು ಹದಿನೈದುನೂರು ವರ್ಷಗಳ ಪೋಷಣೆಯ ನಂತರ ದೇವಜನರಿಂದ ತಿರಸ್ಕರಿತವಾಗಿರುವಿಕೆ ಇದಕ್ಕೆ ಸೇರಿಸಲ್ಪಟ್ಟಿದ್ದವು.

ಈ ಎಲ್ಲದರ ಬೆಳಕಿನಲ್ಲಿ, ಯೇಸು "... ನಾನೇನು ಹೇಳಲಿ ... ?" ಎಂದು ಕೇಳಿದನು (ವಚನ 27). ಅದು, "ನಾನು ಏನೆಂದು ಪ್ರಾರ್ಥಿಸಲಿ" ಎಂದು ಹೇಳಿದಂತಿದೆ. ಅತನು "ತಂದೆಯೇ ಈ ಕಾಲದಿಂದ ನನ್ನನ್ನು ರಕ್ಷಿಸು" ಎಂದು ಪ್ರಾರ್ಥಿಸಿದ್ದೇನೆ (ವಚನ 27)? ಇಲ್ಲ.[14] "ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು" ಎಂದು ಆತನು ಪ್ರಾರ್ಥಿಸಿದನು (ವಚನ 27). ಆತನು "ಕೆಟ್ಟು ಹೋಗಿರುವುದನು ಹುಡಕಿ ರಕ್ಷಿಸುವುಕ್ಕೆ ಬಂದನು" (ಲೂಕ 19;10). ಆತನು ಈ ಭೂಮಿಗೆ ಮರಣಿಸುವುದಕ್ಕಾಗಿಯೇ ಬಂದನು (ಫಿಲಿಪ್ಪಿ 2:7, 8).

**ಸಮರ್ಥನೆ (ವಚನಗಳು 28-30)**

"ತಂದೆಯೇ ನಿನ್ನ ಹೆಸರನ್ನು ಮಹಿಮೆಪಡಿಸಿಕೊ" ಎಂದು ಈ ಮಾತುಗಳನ್ನು ಸಮರ್ಪಣಾಮನೋಭಾವದಿಂದ ಹೇಳಿದನು (ವಚನ 28). ಆತನು ತನ್ನ ಜೀವಿತದುದ್ದಕ್ಕೂ ವಿಧೇಯತೆಯ ಮೂಲಕ ಆತನ ನಾಮವನ್ನು ಮಹಿಮೆಪಡಿಸಿದ್ದನು (ನೋಡಿರಿ ಯೋಹಾನ 17:4); ಮುಂದೆ ತನ್ನ ಮರಣದ ಮೂಲಕ ಮಹಿಮೆಪಡಿಸುವವನಿದ್ದನು.

ಆ ಸಮಯದಲ್ಲಿ, ಅನಿರೀಕ್ಷಿತವಾದದ್ದು ಸಂಭವಿಸಿತು: "ಅಲ್ಲಿ ಆಕಾಶವಾಣಿಯು ಆಯಿತು" (ಯೋಹಾನ 12:28). ಯೇಸುವಿನ ಸೇವೆಯ ಸಮಯ್ದಲ್ಲಿ, ದೇವರು ಮೂರು ಸಾರಿ ಪರಲೋಕದಿಂದ ಮಾತನಾಡಿದನು: ಆತನ ದೀಕ್ಷಾಸ್ನಾನದಲ್ಲಿ (ಮತ್ತಾಯ 3:17), ಆತನ ರೂಪಂತರದ ಸಮಯದಲ್ಲಿ (ಮತ್ತಾಯ 17:5), ಮತ್ತು ಈ ಸಂಧರ್ಭದಲ್ಲಿ. ಈ ಧ್ವನಿಯು "ಮಹಿಮೆಪಡಿಸಿದ್ದೇನೆ [ನನ್ನ ನಾಮವನ್ನು], ತಿರುಗಿ ಮಹಿಮೆಪದಿಸುವೆನು" ಎಂದು ಆ ಧ್ವನಿಯು ಹೇಳಿತು (ಯೋಹಾನ 12:28). ದೇವರ ನಾಮವು ಯೇಸುವಿನ ಜೀವಿತದಿಂದ ಮಹಿಮೆಪಡಿಲ್ಪಟ್ಟಿತು; ಈಗ ಅದು ಕ್ರೂಜೆಯಿಂದಾಗಿ ಮಹಿಪಡಿಸಲ್ಪಡುತ್ತಿದೆ.

ಆಕಾಶವಾಣಿಯಿಂದ ಗುಂಪು ಬಹುವಾಗಿ ಬೆದರಿತು ಅಲ್ಲಿ ಸಂಭವಿಸಿದ್ದುದರ ಮೇಲೆ ಜನರು ಎರಡು ಭಾಗವಾದರು. "ಅಲ್ಲಿ ನಿಂತುಕೊಂಡಿದ್ದ ಜನರು ಅದನ್ನು ಕೇಳಿ ಗುಡುಗಿತು ಅಂದರು. ಇನ್ನೂ ಕೆಲವರು ದೇವದೂತನು ಈತನ ಸಂಗಡ ಮಾತನಾಡಿದನು ಅಂದರು" (ವಚನ 29). ನಾವು ಏನನ್ನು ಕೇಳಲು ಸಿದ್ಧರಾಗಿರುತ್ತೇವೆಯೋ ಅದನ್ನೇ ನಾವು ಕೇಳುತ್ತೇವೆ ಎಂಬ ವಾಸ್ತವವನ್ನು ನಾವು ನೆನಪಿಸುವವರಾಗಿದ್ದೇವೆ. ಉದಾರಣೆಗೆ, ವಾತಾವರಣವು ತುಂಬಾ ಗದ್ದಲದಿಂದ ತುಂಬಿದ್ದರಿಂದ ನಮ್ಮ ಕಿವಿಗೆ ಏನೂ ಕೇಳಲಿಲ್ಲ. ಹೇಗೋ, ನಾವು ರೆಡಿಯೋವನ್ನು ತಿರುಗಿಸಿ, ಅದರ ಸ್ಟೇಷನ್‌ಗಳನ್ನು ಟ್ಯೂನ್ ಮಾಡಿದಾಗ, ನಂತರವೇ ಅಲ್ಲಿ ಮಾತು ಗಳನ್ನು ಅಥವಾ ಸಂಗೀತವನ್ನು ಕೇಳುತ್ತೇವೆ. ಯೇಸುವಿನ ಹತ್ತಿರ ನಿಂತಕೊಂಡವರು ದೇವರ ಮಾತನ್ನು ಕೇಳುವುದಕ್ಕೆ ಸಿದ್ಧರಾಗಿರಲಿಲ್ಲ; ಅವರಿಗೆ ಇದು "ಗುಡುಗು" ಕೇವಲ ಒಂದು ಶಬ್ಧ ಆಗಿತ್ತು. ಇಂದೂ ಸಹ ಅನೇಕರು ದೇವರ ಧ್ವನಿಯನ್ನು ಸೃಷ್ಟಿಯಲ್ಲಿ (ರೋಮಾಪುರ 1:20) ಅಥವಾ ಬೈಬಲ್ಲಿನಲ್ಲಿ (ಇಬ್ರೀಯ. 1:1, 2) ಕೇಳಲು "ಸಿದ್ಧರಾಗಿಲ್ಲ."

ಏನೇ ಆಗಲಿ, ಕೆಲವರು ಲೇಖಕನಾದ ಯೋಹಾನನು ಮಾಡಿದಂತೆ ಧ್ವನಿಯನ್ನು ಕೇಳಿದರು ಮತ್ತು ಇದನ್ನು ಅರಿತುಕೊಂಡರು. ಯೇಸು ತನ್ನ ಹತ್ತಿರವಿದ್ದವರ ಕಡೆಗೆ (ವಿಷೇಶವಾಗಿ ಆತನ ಅಪೊಸ್ತಲರ ಕಡೆಗೆ) ತಿರುಗಿಕೊಂಡನು ಮತ್ತು "ಈ ಆಕಾಶವಾಣಿಯು ನನಗಾಗಿ ಆಗಲಿಲ್ಲ; ನಮಗಾಗಿ ಆಯಿತು" ಎಂದು ಹೇಳಿದನು (ಯೋಹಾನ 12:30). ಈ ವ್ಯಕ್ತಪಾಡಿಸುವಿಕೆಯ ಅರ್ಥವು "ಇದು ನನಗಾಗಿ ಮಾತ್ರವಲ್ಲ, ಆದರೆ ನಿಮ್ಮ ಸುಲವಾ ಗಿಯೇ" ಎಂದಾಗಿದೆ.[15] ತನ್ನ ಬರಲಿರುವ ಕಷ್ಟಗಳಿಗಾಗಿ ಮಗನು ತಂದೆಯ ಈ ಸಮರ್ಥನೆಯ ಮೂಲಕ ಖಚಿತವಾಗಿ ಬಲಹೊಂದಿದನು, ಆದರೆ ಇದು ಯೇಸು ಎದುರಿಸುತ್ತಿರುವದು ದೇವರ ಯೋಜನೆಯ ಆಧಾರವೇ ಎಂದು ಶಿಷ್ಯರಿಗೆ ಮನವರಿಸಲು ವಿಷೇಶವಾಗಿ ರೂಪಿಸಲ್ಪಟ್ಟಿದ್ದು ಆಗಿತ್ತು.

## ವಿಜಯದ ಮತ್ತು ಪರಿವರ್ತನೆಗೋಸ್ಕರ ಕಾಲ (ವಚನಗಳು 31-33)

**ವಿಜಯ (ವಚನ 31)**

ಕ್ರಿಸ್ತನು ಕ್ರೂಜೆಯ ಮೇಲೆ ಮರಣಿಸಿದಾಗ ಅನೇಕ ಮಹತ್ವದ ಸಂಗತಿಗಳು ಸಂಭವಿಸಿದವು. ಉದಾಹರಣೆಗೆ, ಇದು ವಿಜಯದ ಸಮಯ, ಕೆಟ್ಟತನದ ಬಲದ ವೇಲೆ ವಿಜಯ ಇದಾಗಿತ್ತು. ಇದು ಸೋಲಿನ *ಕ್ಷಣದ ಹಾಗೆ* ಕಾಣುತ್ತಿತ್ತು, ಆದರೆ ಇದು ನಿಜವಾಗಿಯೂ ವಿಜಯದ ಸಮಯವಾಗಿರಬಹುದು.

"ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು"[16] ಎಂದು ಯೇಸು ಹೇಳಿದನು (ವಚನ 31). "ಇಹಲೋಕಾಧಿಪತಿಯು" ಇದು ಸೈತಾನನ್ನು ಸೂಚಿಸುವುದಾಗಿದೆ (ನೋಡಿರಿ ಯೋಹಾನ 14:30; 16:11).[17] ಸೈತಾನೊಡನೆಯ ಕಾಳಗದಲ್ಲಿ ಶಿಲುಬೆಯು ಅಂತಿಮ ಘಟ್ಟವಾಗಿರುವದು. ಇಂದು ಅನೇಕರು ಒಳ್ಳೆಯತನದ ಮತ್ತು ಕೆಟ್ಟತನದ ಬಲದ ಮಧ್ಯದ ಕರ್ತನ ಆತ್ಮೀಕ ಯುದ್ಧಗಳನ್ನು ಉಳಿಸಿಕೊಳ್ಳುವುದರ (ಹಲವು ಬಾರಿ ಸೂಚಿತವಾದ "ಬೈಬಲ್ಲಿನಲ್ಲಿ ಸೂಚಿತವಾದ ಮಾಹಾವಿಪ್ಲವ") ಬಗೆಗೆ ಮಾತನಾಡುತ್ತಾರೆ, ಆದರೆ ಬೈಬಲ್ ಶಿಕ್ಷಕರು ಯುದ್ಧವು ಶಿಲುಬೆಯ ಮೇಲೆಯೇ ನಡೆಯುತ್ತದೆ ಎಂದು ನಿರ್ಣಯಿಸಿರುತ್ತಾರೆ. ಯೇಸು ರಕ್ತ ಮತ್ತು ಮಾಂಸಗಳಲ್ಲಿ ಭಾಗಿಯಾದವನು "*ತನ್ನ ಮರಣದಿಂದಲೇ* ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ ಮರಣದ ಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸ್ಯತ್ವದೊಳಗಿದ್ದವರನ್ನೆಲ್ಲಾ ಬಿಡಿಸುವುದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು" ಎಂದು ಇಬ್ರಿಯ ಪುಸ್ತಕದ ಲೇಖಕನು ಹೇಳುತ್ತಾನೆ (ಇಬ್ರಿಯ 2:14, 15; ಒತ್ತಿ ಹೇಳಿದ್ದು ನನ್ನದು). ಸೈತಾನನು ಇನ್ನೂ ಕ್ರಿಯಾಶೀಲನಾಗಿದ್ದಾನೆ (1 ಪೇತ್ರ 5:8), ಆದರೆ ನಮ್ಮಲ್ಲಿ ಆತನ ಬಲವು ಮುರಿಯಲ್ಪಟ್ಟಿದೆ; ಆತನು ಸೋತುಹೋದ ವೈರಿಯಾಗಿ ಇದ್ದಾನೆ (ಯಾಕೋಬ 4:7).

**ಪರಿವರ್ತನೆ (ವಚನಗಳು 32, 33)**

ಶಿಲುಬೆಯ ಮೇಲಿನ ಬಲು ಮುಖ್ಯವಾದ ವಿಜಯವು ಪಾಪದ ಮೇಲಿನ ವಿಜಯವೇ ಆಗಿದೆ (2 ಕೊರಿಂಥ 5:21; ಎಫೆಸ 1:7). ಆತನು ತನ್ನ ಬೋಧನೆಯ ಮಧ್ಯ, ತನ್ನನ್ನು ನೋಡಲು ಬಯಸಿದ ಗ್ರೀಕರನ್ನು ಎಂದಿಗೂ ಮರೆಯಲಿಲ್ಲ: "ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು" ಎಂದು ಹೇಳುವ ಮೂಲಕ ಆತನ ಮರಣವು ಕೇವಲ ಯೆಹೂದ್ಯರಿಗೆ ಮಾತ್ರವಲ್ಲ, ಆದರೆ ಎಲ್ಲರಿಗೂ ಎಂದು ಈಗ ಹೇಳು ತ್ತಿದ್ದಾನೆ (ಯೋಹಾನ 12:32).

"ಎಳಕೊಳ್ಳುವೆನು" ಎಂಬ ಪದವು ಹೊಸಒಡಂಬಡಿಕೆಯಲ್ಲಿ ಇನ್ನೊಂದು ಕಡೆಯಲ್ಲಿ ಬಳಸಲ್ಪಟ್ಟಿದ್ದು ಇದು ಉನ್ನತಿಗೇರುವುದನ್ನು ಸೂಚಿಸುವುದಾಗಿದೆ (1 ತಿಮೊಥೆ 3:6; ಯಾಕೋಬ 4:10; ನೋಡಿರಿ KJV), ಆದರೆ ಇದು ಕರ್ತನ ಮರಣವನ್ನು ಸೂಚಿಸುವುದಕ್ಕಾಗಿ ಯಾವಾ ಗಲೂ ಯೋಹಾನನ ಸುವಾರ್ತೆಯಲ್ಲಿ ಬಳಸಲ್ಪಟ್ಟಿದೆ (ಯೋಹಾನ 3:14; 8:28). ನಮ್ಮ ವೇದಭಾಗವು ಪ್ರಕಟಿಸುವ ಮುಂದಿನ ವಚನವು "ಈ ಮಾತಿನಿಂದ ತಾನು ಇಂಥ ಸಾವನ್ನು ಸಾಯತಕ್ಕವನೆಂದು ಸೂಚಿಸಿದನು" (ಯೋಹಾನ 12:33).[18] ಆತನು ಕಲ್ಲೆಸೆದು ಕೊಲ್ಲುವ ಮೂಲಕ ಅಥವಾ ಯೆಹೂದಿಗಳ ಯಾವುದೇ ಮರಣದಂಡನೆಯ ಪದ್ಧತಿಗಳ ಮರಣಿಸುತ್ತಿಲ್ಲ; ಬದಲಾಗಿ ರೋಮನ್ನರ ಶಿಲುಬೆಯ ಮೇಲಿಂದ ಆತನು "ಎತ್ತಲ್ಪಡುವವನಾಗಿದ್ದನು."

ಅದು ಸಂಭವಿಸಿದಾಗ ಆತನು ತಾನೇ ಯೆಹೂದಿಗಳನ್ನು ಮತ್ತು ಅನ್ಯಜನರನ್ನು ಇಬ್ಬರನ್ನೂ ತನ್ನಕಡೆಗೆ "ಎಲ್ಲರನ್ನೂ ಎಳಕೊಳ್ಳುವನು." ಎರಡನ್ನೂ ಒಂದೇ ದೇಹದಲ್ಲಿ ಕೂಡಿಸುವನು. ಪೌಲನು ನಂತರ ಹೀಗೆ ಬರೆಯುತ್ತಾನೆ,

> ನಿಮ್ಮನ್ನೂ ನಮ್ಮನ್ನೂ ಒಂದು ಮಾಡಿದವನಾದ ಆತನೇ ನಮಗೆ ಸಮಾಧಾನ ಕತೃವಾಗಿದ್ದಾನೆ. ಆತನು ತನ್ನ ಶರೀರವನ್ನು ಸಮರ್ಪಿಸಿದ್ದರಲ್ಲಿ ವಿಧಿರೂಪವಾದ ಆಜ್ಞೆಗಳುಳ್ಳ ಧರ್ಮಶಾಸ್ತ್ರವನ್ನು ತೆಗೆದು ಹಾಕಿ ಇದ್ದ ದ್ವೇಷವನ್ನು ಮುಗಿಸಿ ನಮ್ಮನ್ನು ಅಗಲಿಸಿದ ಅಡ್ಡಗೋಡೆಯನ್ನು ಕೆಡವಿಹಾಕಿದನು. ಆತನು ಸಮಾಧಾನ ಮಾಡುವವನಾಗಿ ಉಭಯರನ್ನೂ (ಯೆಹೂದಿಗಳು ಮತ್ತು ಅನ್ಯಜನರು) ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ; ಇದ್ದ ದ್ವೇಷವನ್ನು ತನ್ನ *ಶಿಲುಬೆಯ ಮೇಲೆ ಕೊಂಡು* ಆ ಶಿಲುಬೆಯ ಮೂಲಕ ಉಭಯರನ್ನೂ (ಯೆಹೂದಿಗಳು ಮತ್ತು

ಅನ್ಯ ಜನರು) ಒಂದೇ ದೇಹದಂತಾಗ ಮಾಡಿ ದೇವರೊಂದಿಗೆ ಸಮಾಧಾನವಾಗಿದ್ದಾನೆ (ಎಫೆಸ 2:14-16; ಒತ್ತಿ ಹೇಳಿದ್ದು ನನ್ನದು).

ಸಭೆಯ "ಒಂದೇ ದೇಹವಾಗಿದೆ" (ಎಫೆಸ 1:22, 23; ಕೊಲಸ್ಸೆ 1:18).

ಯೇಸು ಜನರನ್ನು ನಡೆಸಲಾರ ಅಥವಾ ಅವರನ್ನು ನೂಕಲಾರನು ಅಥವಾ ಒತ್ತಾಯಿಸಲಾರನು, ಆದರೆ ಆತನು ಅವರನ್ನು ಎಳೆದುಕೊಳ್ಳುವನು. ದೇವರ ಎಳೆದು ಕೊಳ್ಳುವ ಶಿಲುಬೆ ಮತ್ತು ಪ್ರೀತಿ ಅದರ ಪ್ರತಿನಿಧಿತ್ವವೇ ಆಗಿದೆ (ಯೋಹಾನ 3:16; ರೋಮಾಪುರ 5:8). ಸೂರ್ಯರಶ್ಮಿಯ ಮೆದುವಾಗಿ ಭೂಮಿಯ ಹೊಸ ಸಸ್ಯದ ಮೇಲೆ ಬೀಳುವಂತೆ, ದೇವರ ಪ್ರೀತಿಯು ಸೌಮ್ಯವಾಗಿ ಮನುಷ್ಯರನ್ನು ಆತನೆಡೆಗೆ ಎಳೆಯುವುದಾಗಿದೆ.[19]

## ಗಲಿಬಿಲಿಯ ಮತ್ತು ಸವಾಲಿಗೋಸ್ಕರ ಸಮಯ (ವಚನಗಳು 34-36, 46-48)

### ಗಲಿಬಿಲಿ

ಯೇಸುವಿನ ಮಾತುಗಳನ್ನು ಅರ್ಥೈಸಿಕೊಳ್ಳುವದು ಜನರಿಗೆ ಕಷ್ಟವಾಯಿತು. ಅವರು ಅರ್ಥೈಸಿಕೊಳ್ಳಲಿಲ್ಲ ಎಂಬುದು ಆಶ್ಚರ್ಯಕರವಾದುದೇನಲ್ಲ; ದುರಂತವೆಂದರೆ ಅವರು ಅರ್ಥೈಸಿಕೊಳ್ಳಲು ಪ್ರಯತ್ನಿಸಲಿಲ್ಲ. "ಕ್ರಿಸ್ತನು ಸದಾಕಾಲ ಇರುತ್ತಾನೆಂದು ಧರ್ಮಶಾಸ್ತ್ರದಲ್ಲಿ ಕೇಳಿದ್ದೇವೆ;[20] ಹಾಗಾದರೆ ಮನುಷ್ಯಕುಮಾರನು ಮೇಲಕ್ಕೆ ಎತ್ತಲ್ಪಡಬೇಕೆಂದು ನೀನು ಹೇಳುವದು ಹೇಗೆ?" ಎಂದು ಅವರು ಪ್ರತಿಕ್ರಯಿಸಿದರು (ವಚನ 34). ಹಳೆಯ ಒಡಂಬಡಿಕೆಯ ಯಾವುದೇ ಪರಿಚ್ಛೇದವು ಇದನ್ನು ಹೇಳದು, ಆದರೆ ಮೆಸ್ಸೀಯನು ನಿತ್ಯತ್ವದ ರಾಜ್ಯವನ್ನು ಎಂದೆಂದಿಗೂ ಆಳುವವನಾಗಿರುತ್ತಾನೆ ಎಂದು ಹಳೆಯ ಒಡಂಬಡಿಕೆಯು ಬೋಧಿಸುವುದಾಗಿದೆ (ನೋಡಿರಿ ಯೆಶಾಯ 9:7; ಯೆಹೆಜ್ಕೇಲ 37:25; ದಾನಿಯೇಲ 7:14). ಮೆಸ್ಸೀಯ/ಕ್ರಿಸ್ತನು ಇದನ್ನು "ಎಂದೆಂದಿಗೂ [ನಿತ್ಯವಾಗಿ ಜೀವಿಸುವುದರ] ಉಳಿಯುವುದಕ್ಕಾಗಿ" ಮೂಲಕ ಇದ್ದು ಮಾಡುವವನಾಗಿದ್ದನು ಎಂದು ಯೆಹೂದಿಗಳು ಪರಿಗಣಿಸುವವರಾಗಿದ್ದರು.

"ಮನುಷ್ಯಕುಮಾರನು ಮೇಲಕ್ಕೆ ಎತ್ತಲ್ಪಡಬೇಕೆಂದು ನೀನು ಹೇಳುವದು ಹೇಗೆ?" ಎಂದು ಅವರು ಕೇಳಿದರು (ಯೋಹಾನ 12:34). ಅವರು ಸ್ವಲ್ಪವಾಗಿ "ಮೇಲಕ್ಕೆತ್ತು" ಎಂಬುದು ಕ್ರೂಜಿಸುವುದನ್ನು ಸೂಚಿಸುವ ಅರ್ಥವನ್ನು ಕೊಡುವುದು ಎಂದು ಅರಿತುಕೊಂಡರು, ಆದರೆ ಇದು ಮೆಸ್ಸೀಯನ ಪೂರ್ವಕಲ್ಪನೆಯಲ್ಲಿ ಹೊಂದದೆ ಇದ್ದದ್ದು ಆಗಿತ್ತು. ಆತನು ಹೇಗೆ ಮರಣಿಸಿದರೂ ಹೇಗೆ ಆಳುತ್ತಾನೆ? "ಮನುಷ್ಯಕುಮಾರನು" ಎಂಬ ಆ ಪದವನ್ನು ಆತನು ಅವರಿಗೆ ಅಪರಿಚಿತವಾದ ರೀತಿಯಲ್ಲಿ ಬಳಸುವವನಾಗಿದ್ದಾನೆ ಎಂದು ಅವರು ನಿರ್ಧರಿಸಿದರು. ಅವರು "ಆ ಮನುಷ್ಯಕುಮಾರನು ಯಾರು?" ಎಂದು ಕೇಳಿದರು (ವಚನ 34). ಇನ್ನೊಂದು ರೀತಿಯಲ್ಲಿ ನೀನು ಮೆಸ್ಸೀಯನ ಬಗೆಗೆ ಮಾತನಾಡುತ್ತಿದ್ದೀಯಾ, ಅಥವಾ "ಮತ್ತೋಬ್ಬರ ಬಗೆಗೆ ಮಾತಾನಾಡುತ್ತಿದ್ದೀಯಾ?" ಎಂದೂ ಆಗಿದೆ.

### ಸವಾಲು (ವಚನಗಳು 35, 36, 46-48)

ಯೇಸು ಅವರ ಪ್ರಶ್ನೆಗೆ ನೇರವಾಗಿ ಉತ್ತರಿಸುವ ಬದಲು ಪರೋಕ್ಷವಾಗಿ ಉತ್ತರಿಸಿದನು; ಇದಕ್ಕೆ ಪ್ರತ್ಯುತ್ತರವಾಗಿ, ಆತನು ಸೂಚಿಸುತ್ತಿರುವಂಥ "ಮನುಷ್ಯ ಕುಮಾರನು" ಜಗತ್ತಿಗೆ ಬೆಳಕಾಗಿದ್ದಾನೆ ಎಂದು ಪ್ರತಿಕ್ರಯಿಸಿದನು (ವಚನ 35; ನೋಡಿರಿ 8:12; 9:5). ಹೇಗೋ, ಮೆಸ್ಸಿಯನು ಎಂಬ ಶೀರ್ಷಿಕೆಯ ವಿವರಣೆಯ ಮೂಲಕ ಆತನ ಕೇಳುಗರು ತನ್ನನ್ನು ತಿಳಿದುಕೊಳ್ಳಲು ಸಮರ್ಥರಾಗಬೇಕೆಂಬ ವಿಚಾರವು ಆತನ ಉನ್ನತವಾದ ಮನದಲ್ಲಿ

ಇರಲಿಲ್ಲ. ಬದಲಾಗಿ ಅವರು ತನ್ನನ್ನು ಮೆಸ್ಸೀಯನು ಎಂದ ಅಂಗೀಕರಿಕೊಳ್ಳಬೇಕೆಂದು ಆತನು ಇಚ್ಚಿಸಿದ್ದನು.

ಈ ಸಂದರ್ಭವು ಈ ಜನರನ್ನು ನಂಬುವುದಕ್ಕೆ ಪ್ರೇರೇಪಿಸುವ ಆತನ ಕೊನೆಯ ವ್ಯಕಿಗತ ಅವಕಾಶವು ಇದಾಗಿರಬಹುದು. ಅನೇಕ ಸಂದರ್ಭಗಳಲ್ಲಿ, ಕೆಲವರೊಡನೆ ಮಾತನಾಡಲು ನನಗೆಂದಿಗೂ ಇನ್ನೊಂದು ಅವಕಾಶವು ಸಿಕ್ಕದು ಎಂಬ ಭಾವನೆಯಿಂದ ನಾನು ಅಂತಿಮ ಸಂದೇಶವನ್ನು ಸಾರಿದ್ದೇನೆ. ಜವಾಬ್ದಾರಿಯು ಮಿತಿಮೀರಿದ್ದಾಗಿತ್ತು. ನಾನೇ ನನ್ನು ಹೇಳಬಹುದು? ನಾನೇನನ್ನು ಹೇಳಬೇಕು?

ಕ್ರಿಸ್ತನವಾದದ ಒತ್ತಿಹೇಳುವಿಕೆಯು ಆ ಕ್ಷಣದಲ್ಲಿ ಅವಶ್ಯವಿರುವ ಅವಸರದ ಮಹತ್ವವೇ ಆಗಿತ್ತು. "ಇನ್ನೂ ಸ್ವಲ್ಪ ಕಾಲವೇ ಬೆಳಕು ನಿಮ್ಮಲ್ಲಿ ಇರುತ್ತದೆ" ಎಂದು ಹೇಳಿದನು (12:35). ಹಿಂದೆಯೇ ಆತನು ತನ್ನನ್ನು ತಾನು "ಲೋಕದ ಬೆಳಕು" ಎಂದು ಗುರುತಿಸಿಕೊಂಡಿದ್ದನು (9:5). ಆತನು ತನ್ನ ಮರಣಕ್ಕಿಂತ ಮುಂಚೆ ಇನ್ನೂ ಕೆಲವು ದಿನ ಈ ಜನರೊಡನೆ ಇರುವವನಾಗಿದ್ದನು. ಆದ್ದರಿಂದಲೇ ಕೊಡಲ್ಪಟ್ಟ ಸಂದರ್ಭದ ಅವಕಾಶವನ್ನು ತೆಗೆದುಕೊಳ್ಳಲು ಪ್ರೇರೇಪಿಸಿದನು: "ಕತ್ತಲೆಯು ನಿಮ್ಮನ್ನು ಮುಸುಕಿಕೊಳ್ಳದಂತೆ ಬೆಳಕು ನಿಮಗೆ ಇರುವಾಗಲೇ ಸಂಚಾರಮಾಡಿರಿ" (12:5) ಎಂದು ಹೇಳಿದನು. ಆತನನ್ನು ಕ್ರಿಸ್ತನೆಂದು ಅಂಗೀಕರಿಸಿಕೊಳ್ಳಲು ಅವರನ್ನು ಅಂಗಲಾಚಿದನು: "ನಿಮಗೆ ಬೆಳಕು ಇರುವಾಗಲೇ ಬೆಳಕನ್ನು *ನಂಬಿರಿ*" (ವಚನ 36; ಒತ್ತಿ ಹೇಳಿದ್ದು ನನ್ನದು). ಅವರು ಆತನನ್ನು ನಂಬಿದ್ದಾದರೆ, ಅವರು "ಬೆಳಕಿನವರಾಗುವರು" (ವಚನ 36). ಅವರು ಆತನ ಬೆಳಕಿನ ಪ್ರತಿಫಲನಗಳಾಗಿದ್ದಾರೆ.

ಆತನನ್ನು ಅವರು ಅಂಗಕರಿಸಲಿಲ್ಲವಾದರೆ ಏನಾಗತ್ತದೆ? ಅಧ್ಯಾಯದ ಮೇಲಿನಿಂದ ಅಂತ್ಯದವರೆಗೆ ನೋಡುವುದಾದರೆ, ಬೆಳಕನ್ನು ತಿರಸ್ಕರಿಸುವ ದುರಂತವನ್ನು ನಾವು ನೋಡುತ್ತೇವೆ. ಯೇಸು ಹೀಗೆ ಹೇಳಿದನು,

> ನನ್ನನ್ನು ನಂಬುವ ಒಬ್ಬನಾದರೂ ಕತ್ತಲಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ. ಯಾವನಾದರೂ ನನ್ನ ಮಾತುಗಳನ್ನು ಕೇಳಿದರೂ ಕೈಕೊಂಡು ನಡೆಯದೆ ಹೋದರೆ ನಾನೇ ಅವನಿಗೆ ತೀರ್ಪುಮಾಡುವುದಿಲ್ಲ; ಲೋಕಕ್ಕೆ ತೀರ್ಪುಮಾಡುವುದಕ್ಕಾಗಿ ನಾನು ಬಂದಿಲ್ಲ; ಲೋಕವನ್ನು ರಕ್ಷಿಸುವುದಕ್ಕಾಗಿ ಬಂದಿದ್ದೇನೆ. ನನ್ನನ್ನು ಲಕ್ಷಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪುಮಾಡುವಂಥದ್ದು ಒಂದು ಇದೆ, ಅದು ಯಾವುದೆಂದರೆ, ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವದು (ವಚನಗಳು 12:46-48).[21]

ಯೋಹಾನನು ತನ್ನ ವಿವರಣೆಯಲ್ಲಿ ಈ ಪ್ರಸಂಗವನ್ನು "ಇದನ್ನು ಯೇಸು ಹೇಳಿದ ಮೇಲೆ ಅವರನ್ನು ಬಿಟ್ಟು ಹೋಗಿ ಅಡಗಿಕೊಂಡನು" ಎಂದು ಹೇಳುತ್ತಾನೆ (ವಚನ 36). ನಾವು ಯೋಚಿಸಿದ ಹಾಗೆ, ಕ್ರಿಸ್ತನ ಜೀವಿತದಲ್ಲಿ ನಡೆದ ಘಟನೆಗಳ ಸರಣಿಯು ಸರಿಯಾಗಿದ್ದಾದರೆ, ಆತನು ತನ್ನ ಶಿಷ್ಯರೊಡನೆ ಎಣ್ಣೆಮರದ ಗುಡ್ಡಕ್ಕೆ ಹೊರಟುಹೋದನು (ಮತ್ತಾಯ 24:1, 3). ಹೇಗೂ, "ಎಲ್ಲಿ" ಎಂಬುದು ಮಹತ್ವದ್ದಲ್ಲ; ಆತನು ಹೊರಟುಹೋಗಿದ್ದು ಮುಖ್ಯವಾದದ್ದಾಗಿದೆ (ನೋಡಿರಿ KJV) ಮತ್ತು ಅವರಿಂದ "ಅಡಗಿಕೊಂಡನು." ಅವರ ಅವಕಾಶದ ದಿನವು ಹೊರಟುಹೋಯಿತು.

## ಮುಕ್ತಾಯ

ಕರ್ತನ "ಅಂತಿಮ ಪ್ರಸಂಗದ" ಕುರಿತಾಗಿ ಜನರು ಯಾವ ತರದ ಪ್ರತಿಕ್ರಿಯೆಯನ್ನು ಹೊಂದಿದ್ದರು? ಯೋಹಾನ 12ರ ಕೊನೆಯ ಭಾಗವು (ವಚನಗಳು 37-50) ಯೆಹೂದ್ಯರಲ್ಲಿ ಮನೆಮಾಡಿದ ಅಪನಂಬಿಕೆಯನ್ನು ಒತ್ತಿ ಹೇಳಿತು.[22] ಜನರಿಗೆ ಪ್ರತಿಕ್ರಯಿಸಲು ಮತ್ತು ಅವರು

ಹಾಗೆ ಮಾಡದಿರಲು ಪ್ರೇರೇಪಿಸಿದಾಗ ನಾನು ಎಷ್ಟು ದುಃಖಿತನಾಗಿದ್ದೆನು ಎಂಬುದನ್ನು ನಾನು ಬಲ್ಲೆನು; ಆತನ ಕೇಳಗರೊಳಗಿನ ಪ್ರತಿಕ್ರಿಯೆಯ ಕೊರತೆಯು ಖಚಿತವಾಗಿ ಯೇಸುವಿನ ಹೃದಯವನ್ನು ಒಡೆಯದಿರಬಹುದು.

ಈಗ ಹೇಗೋ, ವೈಯಕ್ತಿಕವಾಗಿ ಅನ್ವಯವನ್ನು ಮಾಡುವದು ನಮಗೆ ಅವಶ್ಯವಿದೆ.[23] ನಾವು ಯೇಸುವನ್ನು ಶ್ಲಾಘಿಸುತ್ತೇವೆಯಾ? ನಾವು ಕ್ರೂಜೆಯನ್ನು ಶ್ಲಾಘಿಸುತ್ತೇವೆಯಾ? ಕ್ರೂಜೆಯು ಯೇಸುವು ಬೆಲೆಯನ್ನು ತೆತ್ತಿರುವುದನ್ನು ನಾವು ಶ್ಲಾಘಿಸುತ್ತೇವೆಯಾ (ವಚನ 27)? ಸಮಯದ ತುರ್ತನ್ನು ನಾವು ಅರ್ಥೈಸಿಕೊಳ್ಳಬಲ್ಲೆವಾ? ನಿಮ್ಮ ಪ್ರತಿಕ್ರಿಯೆಗೋಸ್ಕರ "ಆ ಕಾಲವು ಬಂದಿದೆ." ಕರ್ತನೆಡೆಗೆ *ನೀವು* ಬರುವ ಅವಶ್ಯಕತೆಯು ನಿಮಗೆ ಅನ್ನಿಸಿದಲ್ಲಿ, ಈಗಲೇ ಅದನ್ನು ಮಾಡಿರಿ ಎಂದು ನಾನು ಬೇಡಿಕೊಳ್ಳುವವನಾಗಿದ್ದೇನೆ.

ಟಿಪ್ಪಣಿಗಳು

[1]ಸಾಮಾನ್ಯವಾಗಿ ನನಗೆ ಸಭೆಯ ಪ್ರದೇಶದಲ್ಲಿನ ಅಧ್ಯಾಪಕತ್ವದ ಮೊದಲು ಮಾತಾಡಲು ಹೇಳಲ್ಪಡುವಾಗ ವಿಷಯವು ಸೂಚಿಸಲ್ಪಡುತಿತ್ತು. [2]ಈ ಹಿಂದೆ ಗಮನಿಸಿದಂತೆ, ಗ್ರೀಕರೊಡನೆಯ ಘಟನೆಯು ಯಾವಾಗ ಸರಿಯಾಗಿ ನಡೆಯಿತು ಎಂಬುದರ ಖಚಿತತೆಯನ್ನು ನಾವು ಅರಯೆವು. [3]ಯೇಸು ಸ್ತ್ರೀ ಆವರಣದಲ್ಲಿ ಇರಬಹುದು. ನಮ್ಮ ಬಾಹ್ಯರೇಷೆಯಲ್ಲಿ, ಈ ಕಥೆಯುವಿಧವೆಯ ಎರಡು ನಾಣ್ಯ ಎಂಬ ಕಥೆಯ ನಂತರದಲ್ಲಿ ಇದೆ. ಈ ಘಟನೆಯು ಬೊಕ್ಕಸದ ಪೆಟ್ಟಿಗೆಯಿರುವಲ್ಲಿ ಘಟಿಸಿತು (ಲೂಕ 21:1). ಇದು ಸ್ತ್ರೀಯರ ಆವರಣದಲ್ಲಿ ಇತ್ತು, ಅನ್ಯಜನರು ಸ್ತ್ರೀಯರ ಆವರಣವನ್ನು ಪ್ರವೇಶಿಸುವಂತಿರಲಿಲ್ಲ. ಇದು ನಮ್ಮ ಪ್ರಸ್ತುತ ಕಥೆಯಾದ ಯೇಸುವನ್ನು ಭೇಟಿಯಾಗಲು ವಿನಂತಿಸಿದ ಗ್ರೀಕರ ಕಥೆಯೊಂದಿಗೆ ಇದು ಹೊಂದುವುದಾಗಿದೆ. ಇನ್ನೊಂದು ಮಾತಿನಲ್ಲಿ, ಯೇಸು ಆತನು ಇದ್ದದ್ದು ಮತ್ತು ಅನ್ಯ ಜನರ ಆವರಣದೊಳಕ್ಕೆ ಹೋಗಿ ಅವರು ಆತನನ್ನು ಬೇಟಿಯಾಗುವ ಮುನ್ನವೇ ಅದನ್ನು ಬಿಟ್ಟು ಹೋಗಲು ಅವರನ್ನು ಬಯಸಿದ್ದನು ಎಂದನು. [4]ಹೊಸ ಒಡಂಬಡಿಕೆಯಲ್ಲಿ ಅನೇಕ ಯೆಹೂದ್ಯರೂ ಮತ್ತು ಕ್ರೈಸ್ತರೂ "ದೇವರಿಗೆ ಭಯಪಡು" ಎಂಬ ಮಾತು ಅವರು ಇನ್ನೂ ನಂಬದೆ ಇರುವುದನ್ನು ಕುರಿತು ಹೇಳುವುದಾಗಿವೆ. [5]"ಮತಾಂತರ ಹೊಂದಿದ" ಎಂಬ ಪದವು ಪದವಾದ *proserchomai,* ಕ್ಕೆ ಸಂಬಂಧಿಸಿದ್ದು ಇದು ವಿಶೇಷಣವಾದ *pros* ("ಗೆ" ಅಥವಾ "ಅದಕ್ಕೆ") ಜೊತೆ *erchomai* ("ಬರುವದು") ಎರಡನ್ನೂ ಜೋಡಿಸುವುದು ಆಗಿದೆ. ಅನ್ಯಜನರು ಬರುವವರಾಗಿದ್ದರು ಮತ್ತು ಯೆಹೂದತ್ವವನ್ನು ಆಲಂಗಿಸುವವ ರಾಗಿದ್ದರು ಎಂದು ಇದು ಹೊಸ ಒಡಂಬಡಿಕೆಯಲ್ಲಿ ಸೂಚಿಸುವುದಾಗಿದೆ. ಮತಾಂತರ ಹೊಂದಿರುವದು ಮೂರು ಬಗೆಯ ಆಚರಣೆಯನ್ನು ಕೊಡುವುದಾಗಿದೆ: (1) ಆತನು ಪುರುಷನಾಗಿದ್ದಾದರೆ ಸುನ್ನತಿ; (2) ಸಾಕ್ಷಿಗಳ ಸಮ್ಮುಖದಲ್ಲಿ ಸ್ವದೀಕ್ಷಾಸ್ನಾನ; (ಮುಳುಗುಸುವಿಕೆ) ಮತ್ತು (3) ಕಾಣಿಕೆಯನ್ನು ಕೊಡುವದು (ದೇವಾಲಯದಲ್ಲಿ ನಿಂತುಕೊಂಡು). ಸುನ್ನತಿಯ ಅವಶ್ಯಕತೆಯ ನಿಮಿತ್ತ ಪುರುಷರಿಗಿಂತ ಅನೇಕ ಸ್ತ್ರೀಯರು ಮತಾಂತರ ಹೊಂದಿದರು. [6]"ಪಿಲಿಪ್ಪನು" ಇದು ಗ್ರೀಕ್ ಪದದ "ಕುದುರೆ ಪ್ರಿಯರು" ಎಂದು ಅರ್ಥಕೊಡುವ ಸಂಯುಕ್ತ ರೂಪದ ಸಂಕ್ಷೇಪಭಾಗವಾಗಿದೆ. [7]ಅಲ್ಲಿ ಎರಡು ಬೆತ್ಸದಾಗಳು ಇವೆ. ಒಂದ ಗಲಿಲಾಯ ಸಮುದ್ರದ ಪೂರ್ವಕ್ಕೆ ಕಪೆರ್ನೌಮಿನಬಳಿಯಲ್ಲಿದೆ (ಮಾರ್ಕ 6:45). ಇನ್ನೊಂದು ಬೆತ್ಸದಾ ಜೂಲಿಯಸ್ ಆಗಿದ್ದು, ಸಮುದ್ರದ ಈಶಾನ್ಯಭಾಗದಲ್ಲಿ ಇರುವ ಹಳ್ಳಿಯಾಗಿದೆ. ಪಿಲಿಪ್ಪನು ಬಹುಶಃ ಕಪೆರ್ನೌಮಿನ ಬಳಿಯಲ್ಲಿನ ಬೆತ್ಸದಾದಲ್ಲಿ ಇದ್ದಿರಬಹುದು, ಆದರೆ ಆತನು ಸಮುದ್ರದ ಪಶ್ಚಿಮಭಾಗದಲ್ಲಿ ಇದ್ದಿರಬಹುದು. ಇದು ಮೂಲತವಾಗಿ ಅನ್ಯಜನಾಂಗದವರ ಪ್ರದೇಶವಾಗಿತ್ತು. [8]ಆದಿ ಸಭೆಯು ಇತಿಹಾಸಕಾರನಾದ ಎಬಿಸಿಯಸ್‌ನು ಯೇಸುವಿನ ಪವಿತ್ರ ಸ್ಥಳದ ಬೇಡಿಕೆಗಾಗಿ ಸಿರಿಯನ ಅರಸನಿಂದ ಗ್ರೀಕರಿಗೆ ಕಳುಹಿಸಲ್ಪಟ್ಟ ದೈವ ಪ್ರೇರಿತವಲ್ಲದ ಸಂಪ್ರದಾಯವನ್ನು ಸೂಚಿಸಿದ್ದಾನೆ, ಆದರೆ ಇದು ಸಾಕ್ಷಾಧಾರಗಳಿಲ್ಲದ್ದಾಗಿದೆ. [9]ಪಿಲಿಪ್ಪ ಮತ್ತು ಆಂದ್ರೆಯರು ಒಂದೇ ಊರಿನವರಾಗಿದ್ದರು (ಯೋಹಾನ 1:44). [10]ಯೋಹಾನನ ವಿವರಣೆಯ ಕೊನೆಯ ಭಾಗದಲ್ಲಿ ಕ್ರಿಸ್ತನ ಜೀವಿತದಲ್ಲಿ "ಮಹಿಮೆಯು" ಪ್ರಮುಖ ಭಾಗವಾಗಿದೆ. ನೀವು ಓದುತ್ತಿರುವಂತೆ ಇದನ್ನು ಗಮನಿಸಿರಿ.

[11]*ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ಸಿಕ್ಕುವ "ಎರಡು ಕುಟುಂಬಗಳು" ಎಂಬ ಪಾಠವನ್ನು ನೋಡಿರಿ. [12]ಯೇಸು ಪರಲೋಕದಲ್ಲಿ ಇರುವವನಾಗಿದ್ದಾನೆ (ನೋಡಿರಿ 2 ಕೊರಿಂಥ 5:8; ಫಿಲಿಪ್ಪಿ 1:23; ಪ್ರಕಟಣೆ 21:3). [13]ಈ ದೃಷ್ಯವು ಈಗಾಗಲೇ ಸಿನಾಪ್ಟಿಕ್ ಸಾವಾರ್ತಿಕರಿಂದ ದಾಖಲಿಸಲ್ಪಟ್ಟಿದ್ದು,

ಇತ್ತಿಚೆಗೆ ಬರೆ ಯಲ್ಪಟ್ಟಿದ್ದು ಆಗಿದೆ. [14]ಯೋಹಾನ 12:27ರಲ್ಲಿ ಇಂಗ್ಲೀಷ್‌ಪದ "ಆದರೆ" ಎಂಬುದು ಗ್ರೀಕಿನ *alla* ದಿಂದ ಒಂದು ವಿರುದ್ಧಾರ್ಥಕವಾಗಿ ಭಾಷಾಂತರಗೊಂಡಿದೆ. ಈ ಸಂದರ್ಭದಲ್ಲಿ, "ಆದರೆ" ಎಂಬ ಪದಕ್ಕಿಂತಲೂ ಪ್ರಬಲವಾದ ಪದದ ಅವಶ್ಯವಿರುವುದಾಗಿದೆ. RSVಯಲ್ಲಿ ಇದಕ್ಕೆ "ಇಲ್ಲ" ಎಂದಿದೆ. [15]ಇದು "ಊಹೆಗಳು" ಎಂದು ಕರೆಯಲ್ಪಡುತ್ತಿದ್ದು ಹೇಳದೆ ಇರುವಂಥವು ಆದರೆ ಅರ್ಥೈಸಿಕೊಳ್ಳುವಂತಹ ಪದಗಳಾಗಿರುವ ರೂಪಕಗಳು ಆಗಿವೆ. [16]ಗ್ರೀಕರು "ಜಗತ್ತನ್ನು" *kosmos,* ಎಂದು ಭಾಷಾಂತರಿಸಿದ್ದು ಇದು ಮೂಲತಃ ಇದರ ಅರ್ಥವು "ಕ್ರಮ ಬದ್ಧವಾಗಿರವದು" ಎಂದಾಗಿದೆ. ಈ ವಚನದಲ್ಲಿ, ಇದು ವಿಶ್ವವನ್ನು ಸೂಚಿಸದು, ಆದರೆ ಭೂಮಿಯನ್ನು ಸೂಚಿಸುವುದಾಗಿದೆ. ವಿಶೇಷವಾಗಿ "ಲೋಕದ ಕ್ರಮವನ್ನು" ಸೂಚಿಸುವ ಬದಲು ಕಲ್ಲುಗಳು ಮತ್ತು ಮರಗಳು ಎಂಬ ವಸ್ತುಗಳನ್ನು ಸೂಚಿಸುವವು ಆಗಿವೆ. [17]"ಇಹಲೋಕಾಧಿಪತಿ" ಎಂಬ ಸಂಕ್ಷಿಪ್ತ ಚರ್ಚೆಗಾಗಿನ ವಿಷಯವು *ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕದಲ್ಲಿ ಇರುವ "ಯೇಸುವಿನ ಶೋಧನೆ" ಎಂಬ ಪಾಠದಲ್ಲಿ ಸಿಕ್ಕುವುದಾಗಿದೆ. [18]ಯೋಹಾನ 12:32ರಲ್ಲಿನ "ಒಂದು ವೇಳೆ" ಎಂಬುದು "ಯಾವಾಗ" ಎಂಬುದನ್ನು ಸೂಚಿಸುವ ಅರ್ಥದಲ್ಲಿ ಬಳಕೆಯಾಗಿದೆ: "ಮೇಲಕ್ಕೆ ಎತ್ತಲ್ಪಟ್ಟಾಗ ..." ಇದು ಆತನ ಮುಂಬರುವ ಕ್ರೂಜೆಯ ಮರಣದ ವಿಷಯವಾಗಿತ್ತು ಎಂಬುದರಲ್ಲಿ ಯಾವ ಸಂಶಯವಿಲ್ಲ (ಮುಂದಿನ ವಚನವನ್ನು ನೋಡಿರಿ). [19]ಆಯಸ್ಕಾಂತದಿಂದ ಶಕ್ತಿಯನ್ನು ಎಳೆಯುವುದು ಇನ್ನೊಂದು ಉಪಮಾನವಾಗಿ ಬಳಸಲ್ಪಟ್ಟಿದೆ, ಈ ಪ್ರಸಂಗಕ್ಕೆ ಹತ್ತಿರವಾದವುಗಳ ಟಿಪ್ಪಣಿಗಳನ್ನು ನೋಡಿರಿ. [20]"ಧರ್ಮಶಾಸ್ತ್ರ" ಎಂಬುದು ಹಳೇ ಒಡಂಬಡಿಕೆಯ ಕೇವಲ ಮೊದಲ ಐದು ಪುಸ್ತಕಗಳನ್ನು ಮಾತ್ರ ಸೂಚಿಸಲು ಇಲ್ಲ ಬಳಸಿಲ್ಲ, ಆದರೆ ಸಮಸ್ತ ಹಳೆಯ ಒಡಂಬಡಿಕೆಯನ್ನೇ ಸೂಚಿಸಲು ಬಳಸಲಾಗಿದೆ.

[21]ಯೋಹಾನ 12:46-48ಕ್ಕೆ ಸಂಬಂಧಿಸಿದಂತೆ ಅಭಿಪ್ರಾಯವನ್ನು ಸಂಕ್ಷಿಪ್ತ *ಕ್ರಿಸ್ತನ ಜೀವನ ಚರಿತ್ರೆ, 5ರಲ್ಲಿ* ಪುಸ್ತಕದಲ್ಲಿ "ಆತನು ಹೊರಟು ಹೋದನು" ಎಂಬ ಪಾಠದಲ್ಲಿ ಕೊಡಲಾಗಿದೆ. [22]ಯೋಹಾನ 12:37-50ರ ವಿಶ್ಲೇಷಣೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 5ರಲ್ಲಿ* ಸಿಕ್ಕುವ "ಆತನು ಹೊರತು ಹೋದನು" ಎಂಬ ಪಾಠವನ್ನು ನೋಡಿರಿ. [23]ನಿಮ್ಮ ಕೇಳುಗರಿಗೆ ಹೊಂದಿಕೆಯಾಗುವಂತೆ ಈ ಅನ್ವಯವನ್ನು ನೀವು ವಿಸ್ತರಿಸಬಯಸಬಹುದು. "ನಾವು ಮರಣಿಸಲು ಸಿದ್ಧರಾಗಿದ್ದೇವೆಯಾ ಇಲ್ಲವೋ ಎಂದು ನಿರ್ಧರಿಸಲೇಬೇಕು. ನಮ್ಮ ಜೀವಿತಗ ಳನ್ನು ಕರ್ತನಿಗೆ ಒಪ್ಪಿಸಲು ನಿರ್ಧರಿಸಲೇಬೇಕು." ನೀವು ನಿಮ್ಮ ಅನ್ವಯವನ್ನು ಮಾಡಿದಂತೆಯೇ, ನೀವು ನಿಮ್ಮ ಕೇಳುಗರಿಗೆ ಯೇಸುವಿಗೆ ವಿಧೇಯರಾಗಲು ಒಪ್ಪಿಗೆಯಿಲ್ಲದ ಹೊರತು ಅವರು ಆತನನ್ನು "ಹಿಂಬಾಲಿಸಲು" ಸಿದ್ಧಾರಾಗಲಾರರು. ಇದು ಅಕ್ರೈಸ್ತರಿಗೆ ಮತ್ತು ಅವಿಶ್ವಾಸಿಗಳಾದ ಕ್ರೈಸ್ತರು ಇಬ್ಬರಿಗೂ ಅನ್ವಯವಾಗುವುದಾಗಿದೆ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38; 8:22, 23; ಯಾಕೋಬ 5:16).